

TATA MOTORS
PRERANA 26YRS
ಹೊಸ ಟಾಟಾ ಮ್ಯಾಜಿಕ್ ಎಕ್ಸ್‌ಪ್ರೆಸ್
8 ಆಸನಗಳ ಬಹುಉಪಯೋಗಿ ವಾಹನ
ಸಂಪೂರ್ಣ ಸ್ಟೀಲ್ ಬಾಡಿಯೊಂದಿಗೆ

ಬುಕ್ಕಿಂಗ್‌ಗಾಗಿ ಸಂಪರ್ಕಿಸಿ
ಪ್ರೇರಣಾ ಮೋಟಾರ್ಸ್ 9663368536

ಆಂದೋಲನ
ದಿನಪತ್ರಿಕೆ
ಸಂಸ್ಥಾಪಕ ಸಂಪಾದಕ: ರಾಜಶೇಖರ ಕೋಟಿ

WALK-IN-INTERVIEWS
CALL CENTER EXECUTIVES
FOR USA PROCESS
CRITERIA:
- Night Shift Only
- Good English Communication
- Good Computer Knowledge
SUNDAY, 10 DECEMBER 2017, FROM 10AM TO 4PM
YES GROUPS: # 1168, 4th Stage, Chaduranga Road, T.K.Layout (Near Stone Building) Mysore.
PHONE : 94485-61500

ಮೈಸೂರಿನ ವಿದ್ಯಾವರ್ಧಕ ಸಂಘದ ವಜ್ರ ಮಹೋತ್ಸವ ಕಾರ್ಯಕ್ರಮಕ್ಕೆ ಆಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಾಲೇಜಿನ ಎನ್‌ಸಿಸಿ ಕೆಡೆಟ್‌ಗಳಿಂದ ಗೌರವ ವಂದನೆ ಸಲ್ಲಿಸಿದಾಗ ವಿದ್ಯಾರ್ಥಿನಿಯೊಬ್ಬರು ಕಂಡಿದ್ದು ಹೀಗೆ...

ಸಿಎಂಗೆ ಎನ್‌ಸಿಸಿ ವಿದ್ಯಾರ್ಥಿನಿ ಗೌರವ

ಶ್ರೀ ಚಾರುಕೀರ್ತಿ ಸ್ವಾಮೀಜಿಗೆ ಶಾಂತಿ ಪ್ರಶಸ್ತಿ

ಶ್ರವಣ ಬೆಳಗೊಳದ ಜೈನ ಮಠದ ಪೀಠಾಧ್ಯಕ್ಷ ಶ್ರೀಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಅವರನ್ನು ೨೦೧೭ನೇ ಸಾಲಿನ ಮಹಾವೀರ ಶಾಂತಿ ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಗರಿಷ್ಠ: ೩೦° । ಕನಿಷ್ಠ: ೧೮°
ಮೋಡಕವಿದ ವಾತಾವರಣ ತುಂತುರು ಮಳೆ ಸಾಧ್ಯತೆ

ಸಂಪುಟ: ೪೬ ಸಂಚಿಕೆ: ೩.೨೯, ರಾಷ್ಟ್ರೀಯ ಶಕ ೧೯೩೯ ಹೇಮಂತ–ಮಾರ್ಗಶಿರ ೧೮, ● ಸಪ್ತಮಿ– ಮಘಾ, ಶನಿವಾರ, ಡಿ.೯, ೨೦೧೭, ದೂರವಾಣಿ: ೨೪೪೭೫೩೦೧, ೨೪೪೭೫೩೦೪, ೨೪೪೭೫೩೦೫, ಫ್ಯಾಕ್ಸ್: ೨೪೪೭೫೩೦೩, ಪುಟ: ೧೨, ರೂ. ೩

ಇನ್ನು ಖಾಸಗಿ ಶಾಲೆಗಿಲ್ಲ ಹಣ ಸರ್ಕಾರಿ ಶಾಲೆ ಸಬಲೀಕರಣ

- ಆರ್‌ಟಿಇ ಕಾಯ್ದೆಯಡಿ ಖಾಸಗಿ ಶಾಲೆಗಳಲ್ಲಿ ಸ್ಥಳೀಯ ಮಕ್ಕಳ ಪ್ರವೇಶ ಮೀಸಲಿಗಾಗಿ ನೀಡುತ್ತಿದ್ದ ೯೦೦ ಕೋಟಿ ರೂ.ಗಳ ನೆರವು ಸ್ಥಗಿತ
- ಅದೇ ಹಣದಲ್ಲಿ ಸರ್ಕಾರಿ ಶಾಲೆಗಳಿಗೆ ಮೂಲಭೂತ ಸೌಕರ್ಯ ಒದಗಿಸಲು ಪ್ರಾಥಮಿಕ ಶಿಕ್ಷಣ ಸಚಿವಾಲಯದ ಮಹತ್ವದ ನಿರ್ಧಾರ

ಬೆಂಗಳೂರು,ಡಿ.೮– ಮೂಲಭೂತ ಸೌಕರ್ಯಗಳಿಲ್ಲದೇ ಸರ್ಕಾರಿ ಶಾಲೆಗಳು ಶಾಶ್ವತವಾಗಿ ಬಂದ್ ಆಗುತ್ತಿರುವ ಹಿನ್ನೆಲೆಯಲ್ಲಿ ಎಚ್ಚೆತ್ತಿರುವ ರಾಜ್ಯ ಸರ್ಕಾರ, ಮುಂದೆ ಖಾಸಗಿ ಶಾಲೆಗಳಿಗೆ ಶಿಕ್ಷಣ ಹಕ್ಕು ಕಾಯ್ದೆ(ಆರ್‌ಟಿಇ)ಯಡಿ ನೀಡುತ್ತಿದ್ದ ಆರ್ಥಿಕ ನೆರವನ್ನು ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಸ್ಥಗಿತಗೊಳಿಸುವ ಮಹತ್ವದ ತೀರ್ಮಾನ ಕೈಗೊಂಡಿದೆ.

ಇದಕ್ಕಾಗಿ ೨೦೦೯ರ ಆರ್‌ಟಿಇ ಕಾಯ್ದೆಗೆ ಮುಂದಿನ ಅಧಿವೇಶನದಲ್ಲಿ ತಿದ್ದುಪಡಿ ತಂದು ವಿಧಾನಮಂಡಲದ ಉಭಯ ಸದನಗಳಲ್ಲಿ ಹೊಸ ಕಾಯ್ದೆ ಮಂಡಿಸುವ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡಿದೆ.

ಖಾಸಗಿ ಶಾಲೆಗಳಿಗೆ ಸರ್ಕಾರದಿಂದ ವರ್ಷಕ್ಕೆ ೯೦೦ ಕೋಟಿ ರೂ. ಖರ್ಚು
ಇದಕ್ಕೆ ಶಿಕ್ಷಣ ತಜ್ಞರು, ಸಾಹಿತಿಗಳು, ಕನ್ನಡ ಪ್ರೇಮಿಗಳಿಂದ ತೀವ್ರ ಆಕ್ಷೇಪ
ಪರಿಣಾಮ ಸರ್ಕಾರಿ ಶಾಲೆಗಳ ಸಬಲೀಕರಣಕ್ಕೆ ಸರ್ಕಾರದ ಚಿಂತನೆ

ಆರ್‌ಟಿಇ ಕಾಯ್ದೆಯಡಿ ಖಾಸಗಿ ಶಾಲೆಗಳಲ್ಲಿ ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಕುಟುಂಬಗಳಿಗೆ ಶೇ. ೨೫ರಷ್ಟು ಸೀಟು ನೀಡಬೇಕೆಂಬ ನಿಯಮವಿದೆ. ಇದರನ್ವಯ ರಾಜ್ಯಾದ್ಯಂತದ ಒಟ್ಟು ೧೧,೯೧೮ ಖಾಸಗಿ ಶಾಲೆಗಳಲ್ಲಿ ೫.೨೨ ಲಕ್ಷ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಇದಕ್ಕಾಗಿ ರಾಜ್ಯ ಸರ್ಕಾರ ಪ್ರತಿ ವಿದ್ಯಾರ್ಥಿಗೆ ಒಂದು ವರ್ಷಕ್ಕೆ ೧೬ ಸಾವಿರ ರೂ.ಗಳಂತೆ ಖಾಸಗಿ ಶಾಲೆಗಳಿಗೆ ಮರು ಪಾವತಿಸಬೇಕು. ಇದರಿಂದ ವಾರ್ಷಿಕವಾಗಿ ಸರ್ಕಾರದ ಬೊಕ್ಕಸಕ್ಕೆ ೮೫೦ರಿಂದ ೯೦೦ ಕೋಟಿ ರೂ. ವೆಚ್ಚ ತಗಲುತ್ತದೆ.

ಇದೀಗ ಇಷ್ಟು ದೊಡ್ಡ ಮೊತ್ತದ ಹಣವನ್ನು ಖಾಸಗಿ ಶಾಲೆಗಳಿಗೆ ನೀಡುವ ಬದಲು ಸರ್ಕಾರಿ ಶಾಲೆಗಳಿಗೆ ಆರ್ಥಿಕ ನೆರವು ನೀಡಿ ಉತ್ತಮ ಮೂಲಭೂತ ಸೌಕರ್ಯ ಕಲ್ಪಿಸಿ ಮೇಲ್ದರ್ಜೆಗೇರಿಸುವುದು ಸರ್ಕಾರದ ಉದ್ದೇಶವಾಗಿದೆ.

ಮೂಲಭೂತ ಸೌಕರ್ಯಗಳಿಲ್ಲದ ಕಾರಣದಿಂದಾಗಿಯೇ ಮಕ್ಕಳ ಸಂಖ್ಯೆಯಲ್ಲಿ ತೀವ್ರ ಇಳಿಕೆಯಾಗಿ ರಾಜ್ಯದ ಸಾವಿರಾರು ಸರ್ಕಾರಿ ಶಾಲೆಗಳಿಗೆ ಬೀಗ ಬಿದ್ದಿದೆ. ಶಾಲೆಗೆ ಅತ್ಯಗತ್ಯವಾದಷ್ಟು ಸಂಖ್ಯೆಯಲ್ಲಿ ಕೊಠಡಿ ಇಲ್ಲದಿರುವುದು, ಶಿಕ್ಷಕರ ಕೊರತೆ, ಆಟದ ಮೈದಾನ, ಪ್ರತ್ಯೇಕ ಶೌಚಾಲಯ, ಕಪ್ಪು ಹಲಗೆ ಸೌಲಭ್ಯವೇ ಇಲ್ಲದಿರುವುದು ಸೇರಿದಂತೆ ವಿವಿಧ ಸಮಸ್ಯೆಗಳಿಂದ ಸರ್ಕಾರಿ ಶಾಲೆಗಳು ಬಸವಳಿದು ಬಂದ್ ಆಗಿವೆ. ಕೆಲವೆಡೆ ಗ್ರಾಮೀಣ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆ ಆಗಬಾರದೆಂಬ ಕಾರಣ ಕ್ಕಾಗಿ ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಯನ್ನು ಪಕ್ಕದೂರಿನ ಶಾಲೆಯಲ್ಲಿ ವಿಲೀನಗೊಳಿಸಲಾಗಿದೆ.

ತೀವ್ರ ಆಕ್ಷೇಪ: ಖಾಸಗಿ ಶಾಲೆಗಳಿಗೆ ಸರ್ಕಾರ ಪ್ರತಿ ವರ್ಷ ೮೫೦ರಿಂದ ೯೦೦ ಕೋಟಿ ರೂ. ಖರ್ಚು ಮಾಡುತ್ತಿರುವುದಕ್ಕೆ ಶಿಕ್ಷಣ ತಜ್ಞರು, ಸಾಹಿತಿಗಳು, ಕನ್ನಡ ಪ್ರೇಮಿಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಖಾಸಗಿ ಶಾಲೆಗಳಿಗೆ ಹಣ ನೀಡುವ ಬದಲು ಇದೇ ಹಣದಲ್ಲಿ ಸರ್ಕಾರಿ ಶಾಲೆಗಳಿಗೆ ಉತ್ತಮ ಮೂಲಭೂತ ಸೌಕರ್ಯ ಕಲ್ಪಿಸಿದರೆ ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡಬಹುದು ಎಂದು ಸರ್ಕಾರದ ಗಮನಕ್ಕೆ ತಂದಿದ್ದರು.

ಇದನ್ನು ಗಂಭೀರವಾಗಿ ಪರಿಗಣಿಸಿರುವ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ತನ್ವೀರ್ ಸೇಠ್, ಕಾಯ್ದೆಗೆ ತಿದ್ದುಪಡಿ ತಂದು ಖಾಸಗಿ ಶಾಲೆ ಆರ್ಥಿಕ ನೆರವು ಸ್ಥಗಿತ ಕುರಿತು ಚರ್ಚೆ ನಡೆಸಿದ್ದಾರೆ. ಈ ಹಣದಲ್ಲಿ ಸರ್ಕಾರಿ ಶಾಲೆ ಸಬಲೀಕರಣ ಮಾಡುವುದಾಗಿ ಹೇಳಿದ್ದಾರೆ.

⏭ ೧೦

ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಆರ್‌ಟಿಇ ಕಾಯ್ದೆಯಡಿ ನೀಡುತ್ತಿದ್ದ ಆರ್ಥಿಕ ನೆರವನ್ನು ಸ್ಥಗಿತಗೊಳಿಸಲಿರುವುದು ಉತ್ತಮ ಬೆಳವಣಿಗೆ. ಆ ದುಡ್ಡನ್ನೇ ಬಳಸಿ ಸರ್ಕಾರಿ ಶಾಲೆ ಅಭಿವೃದ್ಧಿಪಡಿಸಿದರೆ ಬಡ ಮಕ್ಕಳಿಗೆ ಅನುಕೂಲವಾಗಲಿದೆ.

ಆರ್‌ಟಿಇ ಕಾಯ್ದೆಯನ್ವಯ ಖಾಸಗಿ ಶಾಲೆಗಳಿಗೆ ದಾಖಲಾದ ಮಕ್ಕಳನ್ನು ಸರಿಯಾಗಿ ಗಮನಿಸುವುದಿಲ್ಲ. ಇದರಿಂದ ಮಕ್ಕಳ ಮನೋವಿಕಾಸದ ಮೇಲೂ ಪ್ರತಿಕೂಲ ಪರಿಣಾಮವಾಗುತ್ತಿತ್ತು. ರಾಜ್ಯ ಸರ್ಕಾರ ಖಾಸಗಿ ಶಾಲೆಗಳಿಗೆ ನೀಡುವ ಆರ್ಥಿಕ ನೆರವನ್ನು ನಿಲ್ಲಿಸಿ, ಮುಚ್ಚುತ್ತಿರುವ ಕನ್ನಡ ಶಾಲೆಗಳ ಹಾಗೂ ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಬಳಸಿಕೊಂಡು ಬೆಳೆಸಬೇಕಿದೆ.

–**ಪ.ಮಲ್ಲೇಶ್**, ಅಧ್ಯಕ್ಷರು, ಕನ್ನಡ ಕ್ರಿಯಾ ಸಮಿತಿ

ಖಾಸಗಿ ಶಾಲೆಗಳಿಗೆ ನೀಡುತ್ತಿದ್ದ ಆರ್ಥಿಕ ನೆರವು ರದ್ದು ಮಾಡಲಿರುವುದನ್ನು ಸ್ವಾಗತಿಸುತ್ತೇನೆ. ಭಾಷೆ ಹಾಗೂ ಧಾರ್ಮಿಕ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳು ಈ ಕಾಯ್ದೆಯ ವ್ಯಾಪ್ತಿಗೆ ಬರುತ್ತಿರಲಿಲ್ಲ. ಕನ್ನಡಿಗರು ನಡೆಸುವ ಖಾಸಗಿ ಶಾಲೆಗಳಿಗಷ್ಟೇ ಈ ಕಾಯ್ದೆ ಅನ್ವಯಿಸುತ್ತಿತ್ತು. ಇದಕ್ಕೂ ಮೊದಲಿನಿಂದಲೇ ಬಡ ಮಕ್ಕಳಿಗೆ ನಮ್ಮ ಶಾಲೆಯಲ್ಲಿ ಪ್ರವೇಶ ನೀಡಿದ್ದೇವೆ. ಸರ್ಕಾರದ ಹಣ ಖಾಸಗಿ ಶಾಲೆ ಬೊಕ್ಕಸ ಸೇರುತ್ತಿತ್ತು. ಆದರೆ ಮಕ್ಕಳಿಗೆ ಸಮಾನ ಶಿಕ್ಷಣವೇನೂ ಸಿಗುತ್ತಿರಲಿಲ್ಲ.

–**ಆರ್.ರಘು**, ಅಧ್ಯಕ್ಷ, ಕೌಟಿಲ್ಯ ವಿದ್ಯಾಲಯ

ರಾಜ್ಯದಲ್ಲಿ ಕಾಂಗ್ರೆಸ್ ಬಲಿಷ್ಠ: ಸಿದ್ದರಾಮಯ್ಯ

ಪ್ರತ್ಯೇಕ ಸಮೀಕ್ಷಾ ವರದಿಯಿಂದ ಖಚಿತ; ಕಾಂಗ್ರೆಸ್ ಬಿಟ್ಟರೆ ರಾಜ್ಯದಲ್ಲಿ ಬೇರಾವುದೇ ಜಾತ್ಯತೀತ ಪಕ್ಷ ಇಲ್ಲ

ಮೈಸೂರಿನ ಗೋಕುಲಂ ೩ನೇ ಹಂತದಲ್ಲಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು ಸಭಾಂಗಣದಲ್ಲಿ ವಿದ್ಯಾವರ್ಧಕ ಸಂಘದ ವಜ್ರ ಮಹೋತ್ಸವದ ಅಂಗವಾಗಿ ಕಾಲೇಜು ವಿಸ್ತರಣಾ ಕಟ್ಟಡಗಳಿಗೆ ಸಿಎಂ ಸಿದ್ದರಾಮಯ್ಯ ಶಂಕುಸ್ಥಾಪನೆ ನೆರವೇರಿಸಿ, ನಾಮಫಲಕವನ್ನು ಅನಾವರಣಗೊಳಿಸಿದರು. ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಸಿದ್ದರಾಜು ಮತ್ತಿತರಿದ್ದರು.

ಮೈಸೂರು,ಡಿ.೮– ಕರ್ನಾಟಕದಲ್ಲಿ ಕಾಂಗ್ರೆಸ್ ಬಲಿಷ್ಠವಾದ ಪಕ್ಷವಾಗಿದೆ. ಈ ವಿಚಾರದಲ್ಲಿ ಎರಡನೇ ಮಾತೇ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅತ್ಯಂತ ಆತ್ಮವಿಶ್ವಾಸದಿಂದ ನುಡಿದರು.

ನಗರದಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಶುಕ್ರವಾರ ಬೆಳಿಗ್ಗೆ ಆಗಮಿಸಿದ ಸಿಎಂ, ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದರು.

ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಬಹುಮತ ಬರುವುದಿಲ್ಲ ಎಂಬ ಸಮೀಕ್ಷಾ ವರದಿ ಪ್ರಕಟವಾಗಿರುವ ಬಗ್ಗೆ ಪ್ರತಿಕ್ರಿಯಿಸಿ, 'ವಿ ಆರ್ ವೆರಿ ಸ್ಟ್ರಾಂಗ್ ಇನ್ ಕರ್ನಾಟಕ. ಕಾಂಗ್ರೆಸ್ ಬಿಟ್ಟರೆ ರಾಜ್ಯದಲ್ಲಿ ಬೇರೆ ಯಾವುದೇ ಜಾತ್ಯತೀತ ಪಕ್ಷಗಳು ಇಲ್ಲ' ಎಂದು ಹೇಳಿದರು.

⏭ ೧೦

ಸಿಎಂ ಪ್ರತಿಪಾದನೆ

- ಯಾರೋ ಮಾಡಿದ ಸಮೀಕ್ಷೆಗೆ ನಾವ್ಯಾಕೆ ಉತ್ತರ ಕೊಡಬೇಕು?
- ನಾನೂ ಕೂಡ ಸರ್ವೆ ಮಾಡಿಸಿದ್ದೇನೆ, ಈಗ ಮೊದಲ ಸುತ್ತಿನ ಸಮೀಕ್ಷೆ ನಡೆದಿದೆ
- ನಾವು ಎಷ್ಟು ಸೀಟು ಗೆಲ್ಲುತ್ತೇವೆಂದು ಯಾರಿಗೇಕೆ ಹೇಳಬೇಕು?

ದೇವೇಗೌಡರು ಯಾರ ಪರ?

ಮೈಸೂರು: ಎಚ್.ಡಿ.ದೇವೇಗೌಡರು ಬಡವರಿಗೆ ಅಕ್ಕಿ ಕೊಡುವುದಿಲ್ಲ, ಮಕ್ಕಳಿಗೆ ಹಾಲು ಕೊಡುವುದಿಲ್ಲ ನಿಲ್ಲಿಸ್ತೀನಿ ಅಂತಾರೆ. ಹಾಲು ಉತ್ಪಾದಕರಿಗೆ ೫ ರೂ. ಹೆಚ್ಚು ಕೊಡುತ್ತಿರುವುದು ಸರಿಯಲ್ಲ ಅಂದಿದ್ದಾರೆ. ಹಾಗಾದರೆ ಇವರು ಯಾರಿಗೋಸ್ಕರ ಇದ್ದಾರೆ? ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ನಮ್ಮಿಬ್ಬರ ಸಂಬಂಧ ಒಂದುಕಾಲದಲ್ಲಿ ಚೆನ್ನಾಗಿತ್ತು. ರಾಜಕೀಯದಲ್ಲಿ ಭಿನ್ನಾಭಿಪ್ರಾಯ ಇದ್ದೇ ಇರುತ್ತೆ ಅಲ್ಲವೇ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಾನು ಜನರ ಪರ: ಎಚ್‌ಡಿಡಿ

ಚಿಕ್ಕಮಗಳೂರು: ನನ್ನನ್ನು ಜಾತಿವಾದಿ ಎಂದು ಬಿಂಬಿಸಲಾಗಿದೆ. ನಾನು ಎಲ್ಲ ವರ್ಗಗಳ ಜನರ ಪರ. ಮೊದಲು ದೇವೇಗೌಡ ಏನು ಎಂಬುದನ್ನು ಸಿದ್ದರಾಮಯ್ಯ ತಿಳಿದುಕೊಳ್ಳಲಿ. ವಾಟ್ ಇಸ್ ದೇವೇಗೌಡ? ಎಂಬುದು ಮುಂಬರುವ ಚುನಾವಣೆಯಲ್ಲಿ ಗೊತ್ತಾಗುತ್ತದೆ. ಸಿದ್ದರಾಮಯ್ಯ ಮಾತ್ರ ಉತ್ತಮರೇ? ನಾವೆಲ್ಲ ಭ್ರಷ್ಟರೇ? ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಖಾರವಾಗಿ ಪ್ರತಿಕ್ರಿಯಿಸಿದ್ದಾರೆ.

ಪೆಲಿಕನ್ ಸಾವಿಗೆ ಹಕ್ಕಿಜ್ವರ ಕಾರಣವಲ್ಲ

ಬೆಂಗಳೂರು ಪ್ರಯೋಗಾಲಯ ವರದಿ

ಮೈಸೂರು,ಡಿ.೮– ಕುಕ್ಕರಹಳ್ಳಿ ಕೆರೆ ಅಂಗಳದಲ್ಲಿ ಪೆಲಿಕನ್ ಪಕ್ಷಿ ಸಾವಿಗೆ ಹಕ್ಕಿಜ್ವರ ಕಾರಣವಲ್ಲ ಎಂದು ಪ್ರಾಣಿ ಆರೋಗ್ಯ ಮತ್ತು ಜೈವಿಕ ಸಂಸ್ಥೆ ದೃಢಪಡಿಸಿದೆ.

ಇದೇ ಕೆರೆ ಅಂಗಳದಲ್ಲಿ ಪೆಲಿಕನ್ ಪಕ್ಷಿಯೊಂದು ಬುಧವಾರ ಅಸ್ವಸ್ಥ ಸ್ಥಿತಿಯಲ್ಲಿ ಪತ್ತೆಯಾದ ಬೆನ್ನಲ್ಲೇ ಗುರುವಾರ ಬೆಳಿಗ್ಗೆ ಮತ್ತೊಂದು ಪೆಲಿಕನ್ ಪಕ್ಷಿ ಮೃತಪಟ್ಟಿತ್ತು. ಅದಾಗಲೇ ಅದರ ದೇಹ ಕೊಳೆತಿತ್ತು. ಪಶು ವೈದ್ಯಾಧಿಕಾರಿ ಡಾ.ಪ್ರಸಾದಮೂರ್ತಿ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಪಕ್ಷಿಯ ದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಬೆಂಗಳೂರಿನ ಪ್ರಯೋಗಾಲಯಕ್ಕೆ ರವಾನಿಸಿದ್ದರು. ಬೆಂಗಳೂರಿನ ಪ್ರಾಣಿ ಆರೋಗ್ಯ ಮತ್ತು ಜೈವಿಕ ಸಂಸ್ಥೆಯ ವೈದ್ಯರು, ಪಕ್ಷಿಯ ಸಾವಿಗೆ ಹಕ್ಕಿ ಜ್ವರ ಕಾರಣವಲ್ಲ ಎಂದು ಶುಕ್ರವಾರ ಖಚಿತಪಡಿಸಿದ್ದಾರೆ. ಪಕ್ಷಿಯ ಸಾವಿಗೆ ನಿಖರವಾದ ಕಾರಣ ಏನು ಎಂಬ ಬಗ್ಗೆ ಸೋಮವಾರ ವರದಿ ನೀಡಲಾಗುವುದು ಎಂದು ಸಂಸ್ಥೆಯ ಅಧಿಕಾರಿಗಳು ತಿಳಿಸಿದ್ದಾರೆ.

ಉದ್ಯಮಿಗೆ ಬೆದರಿಕೆ: ಕೈದಿ ಬಸವ ವಿಚಾರಣೆಗೆ ಸಿದ್ಧತೆ

ಕಸ್ಟಡಿ ಕೋರಿ ಮಂಡಿ ಠಾಣೆ ಪೊಲೀಸರಿಂದ ನ್ಯಾಯಾಲಯಕ್ಕೆ ಇಂದು ಮನವಿ

ಮೈಸೂರು,ಡಿ.೮– ನಗರದ ಜೈಲಿನಲ್ಲಿದ್ದುಕೊಂಡೇ ಮಂಡ್ಯ ಉದ್ಯಮಿಗೆ ಜೀವ ಬೆದರಿಕೆ ಒಡ್ಡಿ ೨೦ ಲಕ್ಷ ರೂ. ಹಣಕ್ಕೆ ಬೇಡಿಕೆ ಇಟ್ಟಿದ್ದ ಸಜಾ ಕೈದಿ ಬಸವರಾಜು ಎಂಬಾತನನ್ನು ಮಂಡಿ ಠಾಣಾ ಪೊಲೀಸರು ಶನಿವಾರ ತಮ್ಮ ವಶಕ್ಕೆ ಪಡೆದು ವಿಚಾರಣೆ ನಡೆಸಲಿದ್ದಾರೆ.

ಶನಿವಾರ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲು ಸಿದ್ಧತೆ ಮಾಡಿಕೊಂಡಿರುವ ಮಂಡಿ ಠಾಣೆ ಪೊಲೀಸರು, ಉದ್ಯಮಿಗೆ ಜೀವ ಬೆದರಿಕೆ, ಬ್ಯಾರಕ್‌ನಲ್ಲಿ ಗಾಂಜಾ ಮತ್ತು ಮೊಬೈಲ್ ಪತ್ತೆ ಪ್ರಕರಣದಲ್ಲಿ ಹೆಚ್ಚಿನ ವಿಚಾರಣೆ ಅಗತ್ಯವಿರುವುದರಿಂದ ಕೈದಿ ಬಸವರಾಜುವನ್ನು ತಮ್ಮ ವಶಕ್ಕೆ ಕೊಡಬೇಕು ಎಂದು ಮನವಿ ಮಾಡಲಿದ್ದಾರೆ ಎಂದು ತಿಳಿದುಬಂದಿದೆ.

ಇದೇ ವೇಳೆ ಜೈಲಿನೊಳಗೆ ಗಾಂಜಾ, ಮೊಬೈಲ್ ಫೋನ್ ಮತ್ತು ಹಲವು ಸಿಮ್‌ಗಳು ಪತ್ತೆಯಾಗಿರುವ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಕಾರಾಗೃಹ ಇಲಾಖೆಯ ಹಿರಿಯ ಅಧಿಕಾರಿಗಳು ಹೆಚ್ಚಿನ ತನಿಖೆ ನಡೆಸಲು ಸಿದ್ಧತೆ ನಡೆಸಿದ್ದಾರೆ.

ವರ್ಗೀಕೃತ ಜಾಹೀರಾತು
ಪುಟ- ೩, ೫

ಮೈಸೂರು NECC
ಕೋಳಿ ಮೊಟ್ಟೆ ಧಾರಣೆ
100ಕ್ಕೆ Rs. 435
ದೂರವಾಣಿ: 2425156

22 ಕ್ಯಾರೆಟ್ ಚಿನ್ನದ ದರ
ತೊಳಸಿ THOLASI JEWELS
₹2685 1 ಗ್ರಾಂಗೆ
ಹಿಂದಿನ ದಿನದ ದರ
ಅಶೋಕ ರೋಡ್, ಮೈಸೂರು
Ph: 2521926, 2441926

ಪತ್ರಕರ್ತ ರವಿ ಬೆಳಗೆರೆ ಬಂಧನ

- ಸಹೋದ್ಯೋಗಿ ಸುನಿಲ್ ಹೆಗ್ಗರವಳ್ಳಿ ಕೊಲೆಗೆ ಸುಪಾರಿ ಕೊಟ್ಟ ಆರೋಪ
- ಸಿಸಿಬಿ ಪೊಲೀಸ್ ಕಾರ್ಯಾಚರಣೆ; ೧ ರಿವಾಲ್ವರ್, ಬಂದೂಕು ವಶ

ಬೆಂಗಳೂರು,ಡಿ.೮– ಸಹೋದ್ಯೋಗಿ, ಅಪರಾಧ ಸುದ್ದಿಗಳ ವರದಿಗಾರ ಸುನಿಲ್ ಹೆಗ್ಗರವಳ್ಳಿ ಹತ್ಯೆಗೆ ಸುಪಾರಿ ನೀಡಿದ ಆರೋಪದ ಮೇರೆಗೆ ಹಿರಿಯ ಪತ್ರಕರ್ತ ರವಿ ಬೆಳಗೆರೆ ಅವರನ್ನು ಸಿಸಿಬಿ ಪೊಲೀಸರು ಬಂಧಿಸಿ ಪ್ರಥಮ ವಾಹಿತಿ ವರದಿ (ಎಫ್ ಐಆರ್) ದಾಖಲಿಸಿದ್ದಾರೆ.

ಸುನಿಲ್

ಪತ್ರಕರ್ತೆ ಗೌರಿ ಲಂಕೇಶ್ ಹತ್ಯೆ ಪ್ರಕರಣ ತನಿಖೆ ನಡೆಸುತ್ತಿದ್ದ ಪೊಲೀಸರು ಈ ಸ್ಫೋಟಕ ಅಪರಾಧ ಪ್ರಕರಣವನ್ನು ಬಯಲು ಮಾಡಿದ್ದಾರೆ.

ಸುನಿಲ್ ಹೆಗ್ಗರವಳ್ಳಿ ಹತ್ಯೆ ಮಾಡುವಂತೆ ಭೀಮಾ ತೀರದ ಹಂತಕರಿಗೆ ರವಿ ಬೆಳಗೆರೆ ಸುಪಾರಿ ನೀಡಿದ್ದರು ಎಂದು ಆರೋಪಿಸಲಾಗಿದೆ.

ಜೈಲಿಗೆ ಬೇಡ ಎಂದು ಮನವಿ: ರವಿ ಬೆಳಗೆರೆ ಅವರನ್ನು ಶುಕ್ರವಾರ ಬಂಧಿಸಿದ ಪೊಲೀಸರು ಸಿಸಿಬಿ ಕಚೇರಿಗೆ ಕರೆದೊಯ್ದು ವಿಚಾರಣೆ ಆರಂಭಿಸಿದರು. ತನಗೆ ಆರೋಗ್ಯ ಸರಿಯಿಲ್ಲ. ಹಾಗಾಗಿ ಜೈಲಿಗೆ ಕರೆದೊಯ್ಯ ಬೇಡಿ ಎಂದು ಸಿಸಿಬಿ ಪೊಲೀಸರಲ್ಲಿ ಬೆಳಗೆರೆ ಮನವಿ ಮಾಡಿಕೊಂಡರು ಎಂದು ತಿಳಿದುಬಂದಿದೆ.

ಏನಿದು ಪ್ರಕರಣ?: 'ಹಾಯ್ ಬೆಂಗಳೂರು' ವಾರಪತ್ರಿಕೆ ಸಂಪಾದಕ ರವಿ ಬೆಳಗೆರೆ ಜತೆಗೇ ಸುನಿಲ್ ಹಿಂದೆ ಕೆಲಸ ಮಾಡುತ್ತಿದ್ದರು. ತಮ್ಮ ೨ನೇ ಪತ್ನಿ ಯಶೋಮತಿ ಅವರೊಂದಿಗೆ ಸುನಿಲ್ ಅನೈತಿಕ ಸಂಬಂಧ ಹೊಂದಿದ್ದಾನೆ ಎಂಬ ಶಂಕೆ ಬೆಳಗೆರೆಗೆ ಬಂದಿದೆ. ಹಾಗಾಗಿ ಸುನೀಲ್ ಹತ್ಯೆಗಾಗಿ ಭೀಮಾ ತೀರದ ಹಂತಕರಲ್ಲೊಬ್ಬನಿಗೆ ಸುಪಾರಿ ನೀಡಿದ್ದರು. ಈ ಅಂಶ ತನಿಖೆ ವೇಳೆ ತಿಳಿದುಬಂದಿತೆಂದು ಎಸ್‌ಐಟಿ ಅಧಿಕಾರಿಗಳು ಹೇಳಿದ್ದಾರೆ.

⏭ ೧೦

ರವಿ ಬೆಳಗೆರೆ

ಶಶಿಧರ್

ಹಲವು ಕಲಂಗಳಡಿ ಪ್ರಕರಣ

ರವಿ ಬೆಳಗೆರೆ ವಿರುದ್ಧ ಐಪಿಸಿ ಸೆಕ್ಷನ್ ೩೦೭ (ಕೊಲೆ ಯತ್ನ), ೧೨೦ (ಬಿ) (ಕೊಲೆ ಸಂಚು), ಶಸ್ತ್ರಾಸ್ತ್ರ ಕಾಯ್ದೆ ೩ (ಅಕ್ರಮ ಶಸ್ತ್ರಾಸ್ತ್ರ ಸಂಗ್ರಹ), ೨೫ರ (ಶಸ್ತ್ರಾಸ್ತ್ರ ನೀಡಿಕೆ) ಅಡಿ ಪ್ರಕರಣ ದಾಖಲಾಗಿದೆ. ವಿಚಾರಣೆ ವೇಳೆ ಬಯಲಿಗೆ ಬರಲಿರುವ ಅಂಶಗಳನ್ನು ಪರಿಶೀಲಿಸಿ ಇನ್ನಷ್ಟು ಪ್ರಕರಣಗಳನ್ನು ದಾಖಲಿಸುವ ಸಾಧ್ಯತೆ ಇದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಶಾಸಕರ ಹಕ್ಕುಚ್ಯುತಿ ಪ್ರಕರಣದಲ್ಲಿ ರವಿ ಬೆಳಗೆರೆ ಇತ್ತೀಚೆಗಷ್ಟೇ ೧ ವರ್ಷದ ಜೈಲು ಶಿಕ್ಷೆಗೆ ಗುರಿಯಾಗಿದ್ದು, ಶಿಕ್ಷೆ ಜಾರಿಗೆ ಉಚ್ಚ ನ್ಯಾಯಾಲಯ ಸದ್ಯಕ್ಕೆ ತಡೆ ನೀಡಿದೆ.

ಎಎಂಆರ್ ಎಂಟರ್‌ಪ್ರೈಸಸ್ ಅರ್ಪಿಸುವ
ಮಲ್ಟಿ ನ್ಯಾಷನಲ್ ಬ್ರಾಂಡೆಡ್ ರೆಡಿಮೆಡ್ ಬಟ್ಟೆಗಳ ಮಾರಾಟ
ಮೊದಲ ಬಾರಿಗೆ ಗಾರ್ಮೆಂಟ್ಸ್ ಇತಿಹಾಸದಲ್ಲೇ
ಕ್ರಿಸ್‌ಮಸ್ ಮತ್ತು ನೂತನ ವರ್ಷದ ಪ್ರಯುಕ್ತ ಮಲ್ಟಿನ್ಯಾಷನಲ್ ಗಾರ್ಮೆಂಟ್ಸ್ ಮಾರಾಟ
ದೆಹಲಿ, ಮುಂಬೈ, ಪೂನಾ, ನಾಗ್‌ಪುರ, ಹೈದರಾಬಾದ್ ಮತ್ತು ಬೆಂಗಳೂರಿನಲ್ಲಿ ಅತ್ಯಂತ ಯಶಸ್ವಿಯಾದ ನಂತರ
ಇದೀಗ ಮೈಸೂರಿನ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್‌ನಲ್ಲಿ ಮಾರಾಟ

ಲಾಕೋಸ್ಟೆ, ಝುರಮ್ಯಾನ್, ಟಾಮಿ, ಹಿಲ್‌ಫಿಗರ್, ಎಂ&ಎಸ್, ಬನಾನ ಪಬ್ಲಿಕ್, ಪಾರ್ಕ್ ಅವೆನ್ಯೂ, ಲಾಂಬರ್ಡ್, ಪೀಟರ್ ಇಂಗ್ಲೆಂಡ್, ಚಾರ್ಲ್ಸ್‌ವರ್ತ್, ಕಲರ್‌ಪ್ಲಸ್, ಸ್ಪಾಫೋರ್ಡ್ ಬೆನೆಟನ್, ರೇಮಂಡ್ಸ್, ಪಾರ್ಕ್ಸ್, ಇನ್ನೂ ಹಲವಾರು ಬ್ರಾಂಡೆಡ್ ಕಂಪನಿಗಳ ರೆಡಿಮೆಡ್ ಬಟ್ಟೆಗಳು
Only Fresh Stock ಮಾರಾಟ 2 ದಿನಗಳು ಮಾತ್ರ
10,000/– ದಿಂದ 15000/– ಪ್ಯಾಂಟ್‌ಗಳು & ಶರ್ಟ್ಸ್‌ಗಳು.
ಪ್ರದರ್ಶನದಲ್ಲಿ ಎಲ್ಲಾ ಸೈಜ್‌ಗಳು ದೊರೆಯುತ್ತವೆ.
ಶರ್ಟ್ಸ್ ಸೈಜು 36 – 52. ಪ್ಯಾಂಟ್ ಸೈಜ್ 30 – 52.
ಪ್ಲೀಟ್ ಪ್ಯಾಂಟ್, ಫಾರ್ಮಲ್ ಪ್ಯಾಂಟ್ & ಶರ್ಟ್ಸ್, ಕ್ಯಾಶುಯಲ್ ಶರ್ಟ್ಸ್ ಮತ್ತು ಪ್ಯಾಂಟ್ಸ್ ಹಾಗೂ ಇನ್ನೂ ಅನೇಕ ಕಂಪನಿಗಳ ಪ್ಯಾಂಟ್ಸ್ & ಶರ್ಟ್ಸ್ ಎಂಆರ್‌ಪಿ ರೂ. ~~1800 ರಿಂದ 2500~~/–
ಈಗ ಕೇವಲ ರೂ. 250/–ರಿಂದ 799/– ರವರೆಗೆ ಮಾತ್ರ

: ಸ್ಪೆಷಲ್ ಕೌಂಟರ್‌ನಲ್ಲಿ :
ಬ್ಲೇಜರ್ಸ್, ಸೂಟ್ಸ್, ವ್ಯಾಸ್ಕೋಟ್, ಜಾಕೆಟ್ಸ್, ಜೀನ್ಸ್ ಮತ್ತು ಟಿ–ಶರ್ಟ್ಸ್ ಸಹ ದೊರೆಯುತ್ತದೆ. ಎಂಆರ್‌ಪಿ ರೂ. ~~5000 – 15000/–~~
ಈಗ ಕೇವಲ ರೂ. 995/– ರಿಂದ 3000/– ರವರೆಗೆ
ಸ್ಥಳ : ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್
ಆಡಿಟೋರಿಯಂ ಹಾಲ್, ಜೆ.ಎಲ್.ಬಿ. ರಸ್ತೆ, ಮೈಸೂರು